# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಡಿ\1760\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:29/01/2020

## ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ನರಸಾಪುರ ಪಂಚಾಯತ್‌ನ 1) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ರಮೇಶ್‌ಬಾಬು.ಬಿ.ಆರ್, 2) ಅಧ್ಯಕ್ಷರಾಗಿದ್ದ ಶ್ರೀಮತಿ.ಶೈಲಾರಾಜ್, ಪಂಚಾಯತ್ ರಾಜ್ ತಾಂತ್ರಿಕ ಉಪ ವಿಭಾಗದ ಕಿರಿಯ ಅಭಿಯಂತರರುಗಳಾಗಿದ್ದ 3) ಶ್ರೀ.ವಿ.ಶ್ರೀನಿವಾಸ, 4) ಶ್ರೀ.ವಿ.ನಾಗರಾಜ, 5)ಶ್ರೀ.ಅಂಜಪ್ಪ [ಪ್ರಸ್ತುತ ನಿವೃತ್ತ] ಮತ್ತು 6) ಶ್ರೀಮತಿ.ಕೆ.ಸುನೀತಾ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಾದ 7)ಶ್ರೀ.ಹೆಚ್.ರಂಗನಾಥ್, 8) ಶ್ರೀ.ಸಿ.ಬಿ.ವೆಂಕಟೇಗೌಡ ಮತ್ತು 9)ಶ್ರೀ.ಎಂ.ಮಂಜುನಾಥ ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕ್ ಊದವಾರಪಲ್ಲಿ ಗ್ರಾಮದ ಶ್ರೀ.ವಿ.ರಾಮಕೃಷ್ಣ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ನರಸಾಪುರ ಪಂಚಾಯತ್‌ನ 1) ಕಾರ್ಯದರ್ಶಿಯಾದ ಶ್ರೀ.ಡಿ.ಆರ್.ಮಂಜುನಾಥ ಮತ್ತು 2) ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಕೆ.ಮಹೇಶ್‌ಕುಮಾರ್ (ಇನ್ನು ಮುಂದೆ, '1 ಮತ್ತು 2ನೇ ಎದುರುದಾರರು' ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ತಾಲ್ಲೂಕ್ ನರಸಾಪುರ ಗ್ರಾಮ ಪಂಚಾಯತ್‌ಗೆ 14ನೇ ಹಣಕಾಸು ಯೋಜನೆ ಅಡಿ ದಿ:01/01/16 ರಿಂದ 30/12/2017 ರವರೆಗೆ ₹53,16,131/- ಮಂಜೂರಾಗಿದ್ದು, ಸದರಿ ಹಣವನ್ನು ಯಾವ ಕಾಮಗಾರಿಗಳಿಗೆ ಖರ್ಚು ಮಾಡಲಾಗಿದೆ? ಕ್ರಿಯಾ ಯೋಜನೆ, ಬ್ಯಾಂಕ್ ಫಾರ್ ಶೀಟ್, ನಗದು ಪುಸ್ತಕ ಮತ್ತು ವೋಚರ್‌ಗಳನ್ನು ಕೇಳಿದಾಗ್ಯೂ ಎದುರುದಾರರು ಬ್ಯಾಂಕ್ ಫಾರ್ ಶೀಟನ್ನು ಮಾತ್ರ ಕೊಟ್ಟಿದ್ದಾರೆ. ಆದರೆ, ಇದಕ್ಕೆ ಸಂಬಂಧಿಸಿದ ನಗದು ವಹಿ ಮತ್ತು ವೋಚರ್‌ಗಳನ್ನು ನೀಡಿಲ್ಲ ಮತ್ತು

ದಾಖಲೆಗಳನ್ನು ನೀಡಿದರೆ ಅಕ್ರಮ ಬಯಲಾಗುತ್ತದೆಂದು ದಾಖಲೆಗಳನ್ನು ಗೌಪ್ಯವಾಗಿ ಇರಿಸಿಕೊಂಡಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರಿಂದ ಪಂಚಾಯತ್‌ನ ಹಣದ ವ್ಯವಹಾರವನ್ನು ತಾವು ಮಾಡಿಲ್ಲ. ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ದೂರುದಾರರು ಕೋರಿರುವ ದಾಖಲೆಗಳನ್ನು ಲೆಕ್ಕ ಸಹಾಯಕರಿಂದ ಪಡೆದು ನೀಡಿದೆ. ದಿನಾಂಕ:24/06/16ರ ಚೆಕ್ ಸಂಖ್ಯೆ:53683279ರಲ್ಲಿ ₹1,23,269/– ಮತ್ತು ದಿನಾಂಕ:03/10/16ರ ಚೆಕ್ ಸಂಖ್ಯೆ:53683287ರಲ್ಲಿ ₹1,17,939/– ಹೀಗೆ ಒಟ್ಟು ₹2,41,208/–ಗಳನ್ನು ಗ್ರಾಮ ಪಂಚಾಯತ್‌ನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಖಾತೆ (ಸಂಖ್ಯೆ:115901011000887)ಗೆ ಹಾಗೂ ದಿನಾಂಕ:03/10/16ರ ಚೆಕ್ ಸಂಖ್ಯೆ:53683286ರಲ್ಲಿ ₹52,552/–ಗಳನ್ನು ಗ್ರಾಮ ಪಂಚಾಯತ್‌ನ ಅಂಗವಿಕಲರ ಖಾತೆ (ಸಂಖ್ಯೆ:115901011001237)ಗೆ ಹೊಂದಾಣಿಕೆ ಮಾಡಿದ್ದಾರೆಂದು ಲೆಕ್ಕ ಸಹಾಯಕರು ತಿಳಿಸಿದ್ದಾರೆ. ಈ ಹೊಂದಾಣಿಕೆ ಮಾಡಿರುವ ಮೊತ್ತಕ್ಕೆ ವೋಚರ್‌ಗಳಿಲ್ಲ. ದೂರುದಾರರು ಮಾಹಿತಿಯನ್ನು ಕೋರಿದ ದಿನಾಂಕದ ಅಂತ್ಯಕ್ಕೆ ₹29,79,877/–ಗಳು ಅಖೈರು ಶಿಲ್ಕಾಗಿ ಬ್ಯಾಂಕಿನ ಖಾತೆಯಲ್ಲಿ ಉಳಿದಿದೆಯೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದೂರಿನ ಆಪಾದನೆಗಳನ್ನು ಅಲ್ಲಗಳೆದಿದ್ದು, ದಿನಾಂಕ:30/12/2017ಕ್ಕೆ ₹29,79,877/–ಗಳು ಅಖೈರು ಶಿಲ್ಕಾಗಿ ಬ್ಯಾಂಕಿನ ಖಾತೆಯಲ್ಲಿ ಉಳಿದಿದೆ. ದೂರುದಾರರು ಕೋರಿದ ಎಲ್ಲಾ ಮಾಹಿತಿಯನ್ನು ಅವರಿಗೆ ಅಂಚೆ ಮೂಲಕ ಒದಗಿಸಿದೆಯೆಂದು ಹೇಳಿದ್ದಾರೆ.

5. ದಿನಾಂಕ:01/01/16 ರಿಂದ 29/10/17ರ ಅವಧಿಯಲ್ಲಿ ನರಸಾಪುರ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಶ್ರೀ.ಬಿ.ಆರ್.ರಮೇಶ್ ಬಾಬು ಹಾಗೂ ಪಂಚಾಯತ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಶ್ರೀಮತಿ.ಶೈಲಾ ರಾಜ್ ರವರುಗಳನ್ನು ಕ್ರಮವಾಗಿ, 3 ಮತ್ತು 4ನೇ ಎದುರುದಾರರುಗಳನ್ನಾಗಿ ಹಾಗೂ ದೂರಿಗೆ ಸಂಬಂಧಿಸಿದ ಕಾಮಗಾರಿಗಳ ನಿರ್ವಹಣೆ ಮಾಡಿದ ಶ್ರೀ.ವಿ.ಶ್ರೀನಿವಾಸ್, ಶ್ರೀ.ವಿ.ನಾಗರಾಜ, ಶ್ರೀ.ಅಂಜಪ್ಪ ಮತ್ತು ಶ್ರೀಮತಿ.ಕೆ.ಸುನಿತಾ, ಕಿರಿಯ ಅಭಿಯಂತರರುಗಳು ಹಾಗೂ ಶ್ರೀ.ಹೆಚ್.ರಂಗನಾಥ್, ಶ್ರೀ.ಸಿ.ಬಿ.ವೆಂಕಟೇಗೌಡ ಮತ್ತು ಶ್ರೀ.ಎಂ.ಮಂಜುನಾಥ, ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು, ಪಂಚಾಯತ್ ರಾಜ್ ತಾಂತ್ರಿಕ ಉಪ ವಿಭಾಗ, ಕೋಲಾರ ರವರುಗಳನ್ನು 5 ರಿಂದ 11ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿ ಎಲ್ಲಾ ಎದುರುದಾರರುಗಳಿಂದ ದೂರಿಗೆ ಆಕ್ಷೇಪಣೆಗಳನ್ನು ಕೇಳಲಾಯಿತು.

BD/1760/2018



6. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:03/11/17ರಂದು ಪಂಚಾಯತ್‌ನ ಸಂಪೂರ್ಣ ಪ್ರಭಾರವನ್ನು 2ನೇ ಎದುರುದಾರರಿಗೆ ಹಸ್ತಾಂತರಿಸಿರುವುದಾಗಿ ಹೇಳಿದ್ದಾರೆ.

7. ನಾಲ್ಕ (4) ರಿಂದ 11ನೇ ಎದುರುದಾರರುಗಳು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಹದಿನಾಲ್ಕನೇ ಹಣಕಾಸು ಯೋಜನೆ ಅಡಿ ಕೋಲಾರ ತಾಲ್ಲೂಕ್ ನರಸಾಪುರ ಗ್ರಾಮ ಪಂಚಾಯತ್‌ಗೆ ಬಿಡುಗಡೆಯಾದ ಅನುದಾನವು ವಿಜಯಾ ಬ್ಯಾಂಕ್, ನರಸಾಪುರ ಶಾಖೆಯಲ್ಲಿ ಪಂಚಾಯತ್ ಹೊಂದಿರುವ ಉಳಿತಾಯ ಖಾತೆ ಸಂಖ್ಯೆ:159010110003505ಗೆ ಜಮಾ ಆಗುತ್ತಿದೆ. ದಿನಾಂಕ:01/01/16 ರಿಂದ 30/12/17ರ ಅವಧಿಯಲ್ಲಿ ಸದರಿ ಖಾತೆಗೆ 14ನೇ ಹಣಕಾಸು ಯೋಜನೆಯ ಅನುದಾನ ಈ ಕೆಳಕಂಡ ದಿನಾಂಕಗಳಂದು ಜಮಾ ಆಗಿರುವುದು ಕಂಡು ಬಂದಿದೆ–

| ಕ್ರ. ಸಂ. | ದಿನಾಂಕ | ಮೊತ್ತ ₹ ಗಳಲ್ಲಿ |
|---|---|---|
| 1 | 06/05/16 | 618082.00 |
| 2 | 07/06/16 | 658680.00 |
| 3 | 05/08/16 | 897748.00 |
| 4 | 20/10/16 | 55660.00 |
| 5 | 21/11/16 | 897599.00 |
| 6 | 24/04/17 | 59928.00 |
| 7 | 10/07/17 | 1004127.00 |
| 8 | 10/11/17 | 1035747.00 |
| | ಒಟ್ಟು ಮೊತ್ತ | 5227571.00 |

2) ಸದರಿ ಅವಧಿಯಲ್ಲಿ ಖರ್ಚಾದ ಹಣದ ವಿವರ ಈ ಕೆಳಗಿನಂತಿದೆ –

| ಕ್ರ.ಸಂ. | ಹೆಸರು ಶ್ರೀ.\ ಶ್ರೀಮತಿ. | ಚೆಕ್ ಸಂಖ್ಯೆ & ದಿನಾಂಕ | ಮೊತ್ತ ₹ಗಳಲ್ಲಿ |
|---|---|---|---|
| 1 | ರಾಮರಾವ್ | 683277, 21/06/16 | 89878.00 |
| 2 | ರಾಮರಾವ್ | 683278, 21/06/16 | 90108.00 |
| 3 | ರಾಮರಾವ್ | 683280, 21/06/16 | 56828.00 |
| 4 | ಎಲ್‌ವಿಒ–180, ಕೋಲಾರ | 683281, 20/07/16 | 9970.00 |
| 5 | ಕೆ.ಹೆಚ್.ಮುನಿಯಪ್ಪ | 683282, 28/07/16 | 56702.00 |
| 6 | ಎಲ್‌ವಿಒ–180, ಕೋಲಾರ | 683283, 17/08/16 | 2387.00 |
| 7 | ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್ | 683284, 18/08/16 | 78850.00 |

| | | | |
|---|---|---|---|
| 8 | ಎಸ್.ನಾರಾಯಣಗೌಡ | 683288, 06/10/16 | 132205.00 |
| 9 | ಎಸ್.ನಾರಾಯಣಗೌಡ | 683289, 06/10/16 | 246587.00 |
| 10 | ಖಾತೆ ಸಂ:138401011002766 | 683292, 23/11/16 | 94662.00 |
| 11 | ಖಾತೆ ಸಂ:138401011002766 | 683293, 23/11/16 | 37118.00 |
| 12 | ರಾಮರಾವ್ | 683295, 07/12/16 | 66432.00 |
| 13 | ಖಾತೆ ಸಂ:64161185037 | 683294, | 145000.00 |
| 14 | ನಾಗೇಂದ್ರಬಾಬು | 683296, 20/02/17 | 139824.00 |
| 15 | ಎಸ್‌ಬಿಎಂ | 683297, 22/03/17 | 12133.00 |
| 16 | ಕೋಲಾರ | 683298, 24/03/17 | 32627.00 |
| 17 | ಕೆ.ಹೆಚ್.ಮುನಿಯಪ್ಪ | 683299, 30/03/17 | 130005.00 |
| 18 | ಎಸ್‌ಬಿಎಂ | 683300, 30/03/17 | 3383.00 |
| 19 | ಎಸ್‌ಬಿಎಂ | 683302, 30/03/17 | 1385.00 |
| 20 | ವಿಎಸ್‌ಒ-180, ಕೋಲಾರ | 683303, 31/03/17 | 5532.00 |
| 21 | ಅಂಜಿನಪ್ಪ | 683304, 20/06/17 | 139067.00 |
| 22 | ಅಂಜಿನಪ್ಪ | 683305, 27/06/17 | 69530.00 |
| 23 | ಮ್ಯಾನೇಜರ್, ಎಸ್‌ಬಿಐ | 683306, 30/08/17 | 2223.00 |
| 24 | ಮ್ಯಾನೇಜರ್, ಎಸ್‌ಬಿಐ | 683307, 30/08/17 | 2584.00 |
| 25 | ವಿಎಸ್‌ಒ-180, ಕೋಲಾರ | 683308, 01/09/17 | 8992.00 |
| 26 | ಅಂಜಿನಪ್ಪ | 683309, 07/10/17 | 77584.00 |
| 27 | ತರುಣ್ ಕುಮಾರ್ | 683312, 06/12/17 | 130350.00 |
| 28 | ಅಂಜಿನಪ್ಪ | 683311, 13/12/17 | 182704.00 |
| **ಒಟ್ಟು ಮೊತ್ತ** | | | **2044650.00** |

3) ಮೇಲಿನ ಉಪ ಖಂಡಿಕೆ-2ರಲ್ಲಿ ಹೇಳಿರುವ ಕ್ರಮ ಸಂಖ್ಯೆವಾರು ಖರ್ಚಿನ ವಿವರಗಳು ಈ ಕೆಳಕಂಡಂತಿದೆ –

| ಕ್ರ. ಸಂ. | ಕಾಮಗಾರಿ | ಖರ್ಚಿಗೆ ಜವಾಬ್ದಾರರಾದ ಅಧಿಕಾರಿಗಳು |
|---|---|---|
| 1 | ನರಸಾಪುರ ಗ್ರಾಮದ ಕೋರ್‌ಮೆನ್ ಅಂಜಿನಪ್ಪ ಮನೆಯಿಂದ ಶ್ರೀಮತಿ.ಸಂಜೀವಮ್ಮ ರವರ ಮನೆಯವರೆಗೆ ಪೈಪ್‌ಲೈನ್ ನಿರ್ಮಾಣ | 3 ರಿಂದ 5 ಮತ್ತು 9ನೇ ಎದುರುದಾರರು |
| 2 | ನರಸಾಪುರ ಗ್ರಾಮದ ಶ್ರೀಮತಿ.ಪರಮ್ಮ ಮನೆಯಿಂದ ಶ್ರೀಮತಿ.ಮುನಿಗುರಮ್ಮ ರವರ ಮನೆಯವರೆಗೆ ಪೈಪ್‌ಲೈನ್ ನಿರ್ಮಾಣ | –”– |
| 3 | ನರಸಾಪುರ ಗ್ರಾಮದ ಶ್ರೀ.ಅರ್ಜುನಪ್ಪ ಮನೆಯಿಂದ | –”– |

BD/1760/2018



| | | |
|---|---|---|
| | ಶ್ರೀ.ಗಿರಿಯಪ್ಪ ರವರ ಮನೆಯವರೆಗೆ ಪೈಪ್‌ಲೈನ್ ನಿರ್ಮಾಣ | |
| 4 | ಕ್ರ.ಸಂ.1 ರಿಂದ 3 ಕಾಮಗಾರಿಗಳ ಬಾಬ್ತು ವ್ಯಾಟ್ ಕಡಿತದ ಬಿಲ್ಲನ್ನು ಪಾವತಿಸಿದೆ | 3 ಮತ್ತು 4ನೇ ಎದುರುದಾರರು |
| 5 | ನರಸಾಪುರ ಗ್ರಾಮದ ಓಂ ಶಕ್ತಿ ದೇವಸ್ಥಾನದ ಹತ್ತಿರ ಮೋರಿ ನಿರ್ಮಾಣ | 3 ರಿಂದ 5 ಮತ್ತು 9ನೇ ಎದುರುದಾರರು |
| 6 | ಕ್ರ.ಸಂ.5 ಕಾಮಗಾರಿ ಬಾಬ್ತು ವ್ಯಾಟ್ ಕಡಿತದ ಬಿಲ್ಲನ್ನು ಪಾವತಿಸಿದೆ | 3 ಮತ್ತು 4ನೇ ಎದುರುದಾರರು |
| 7 | ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್‌ರವರ 06 ಬಿಲ್ಲುಗಳ ಪಾವತಿ | –"– |
| 8 | ನರಸಾಪುರ ಗ್ರಾಮದ ಶನಿ ಮಹಾತ್ಮ ದೇವಸ್ಥಾನದಿಂದ ಶ್ರೀಮತಿ.ಕಲ್ಯಾಣಮ್ಮ ರವರ ಮನೆಯವರೆಗೆ ರಸ್ತೆ ಅಭಿವೃದ್ಧಿ | 3, 4, 6 ಮತ್ತು 10ನೇ ಎದುರುದಾರರು |
| 9 | ನರಸಾಪುರ ಗ್ರಾಮದ ಸಿ–ಬ್ಲಾಕ್ ಶ್ರೀ.ಗುಂಡಪ್ಪ ಮನೆಯಿಂದ ಮುಂದಕ್ಕೆ ಸಿಮೆಂಟ್ ರಸ್ತೆ ನಿರ್ಮಾಣ | –"– |
| 10 | ನರಸಾಪುರ ಗ್ರಾಮದ ಶ್ರೀ.ಚಿಕ್ಕಕೋನಪ್ಪ ಮನೆಯಿಂದ ಶ್ರೀ.ಪೋತಲಪ್ಪ ಮನೆವರೆಗೆ ಸಿಸಿ ರಸ್ತೆ ನಿರ್ಮಾಣ | –"– |
| 11 | ನರಸಾಪುರ ಗ್ರಾಮದ ಸಿ–ಬ್ಲಾಕ್ ಶ್ರೀ.ಜಾಕೀರ್ ಮನೆಯ ಹತ್ತಿರ ಮೋರಿ ನಿರ್ಮಾಣ | –"– |
| 12 | ಶನಿ ಮಹಾತ್ಮ ದೇವಸ್ಥಾನದ ಹಿಂಭಾಗ ಪೈಪ್‌ಲೈನ್ ನಿರ್ಮಾಣ | 3, 4, 7 ಮತ್ತು 11ನೇ ಎದುರುದಾರರು |
| 13 | ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ವಂತಿಗೆ ಬಾಬ್ತು | 3 ಮತ್ತು 4ನೇ ಎದುರುದಾರರು |
| 14 | ಕುರ್ಕಿ ಗ್ರಾಮಕ್ಕೆ ಹೊಸದಾಗಿ ಪೈಪ್‌ಲೈನ್ ಕಾಮಗಾರಿ | 3, 4, 7 ಮತ್ತು 11ನೇ ಎದುರುದಾರರು |
| 15 | ಕ್ರ.ಸಂ.1 ರಿಂದ 3, 5, 8 ರಿಂದ 12 & 14 ಕಾಮಗಾರಿಗಳ ಬಿಲ್ ಬಾಬ್ತು ಆದಾಯ ತೆರಿಗೆ ಪಾವತಿ | 3 ಮತ್ತು 4ನೇ ಎದುರುದಾರರು |
| 16 | ಕ್ರ.ಸಂ.5, 8 ರಿಂದ 12 & 14 ಕಾಮಗಾರಿಗಳ ಬಿಲ್ ಬಾಬ್ತು ಮೌಲ್ಯವರ್ಧಿತ ತೆರಿಗೆ ಪಾವತಿ | –"– |
| 17 | ನರಸಾಪುರ ಗ್ರಾಮದ ಎ–ಬ್ಲಾಕ್‌ನಲ್ಲಿ ಮೋರಿ ನಿರ್ಮಾಣ | 3, 4, 7 ಮತ್ತು 11ನೇ ಎದುರುದಾರರು |
| 18 | ಕ್ರ.ಸಂ.17 ಕಾಮಗಾರಿ ಬಿಲ್ ಬಾಬ್ತು ಆದಾಯ ತೆರಿಗೆ ಪಾವತಿ | 3 ಮತ್ತು 4ನೇ ಎದುರುದಾರರು |
| 19 | ಕ್ರ.ಸಂ.17 ಕಾಮಗಾರಿ ಬಿಲ್ ಬಾಬ್ತು ರಾಜಧನ ಪಾವತಿ | –"– |
| 20 | ಕ್ರ.ಸಂ.17 ಕಾಮಗಾರಿ ಬಿಲ್ ಬಾಬ್ತು ವ್ಯಾಟ್ ಪಾವತಿ | –"– |

| | | |
|---|---|---|
| 21 | ನರಸಾಪುರ ಗ್ರಾಮದ ಬಿ–ಬ್ಲಾಕ್ ಶ್ರೀ.ಲಕ್ಷ್ಮಣ ಮನೆ ಯಿಂದ ಸಿಮೆಂಟ್ ರಸ್ತೆ & ಚರಂಡಿ ನಿರ್ಮಾಣ | 3, 4, 7 ಮತ್ತು 11ನೇ ಎದುರುದಾರರು |
| 22 | ನರಸಾಪುರ ಗ್ರಾಮದ ಡಿ–ಬ್ಲಾಕ್ ಗಂಗಮ್ಮ ದೇವಸ್ಥಾನದ ನಾರಾಯಣ ಸ್ವಾಮಿ ಮನೆಯಿಂದ ಕೆರೆಯ ಕಡೆಗೆ ಯೂ–ಟೈಪ್ ಚರಂಡಿ ನಿರ್ಮಾಣ | –"– |
| 23 | ಕ್ರ.ಸಂ.21 & 22 ಕಾಮಗಾರಿ ಬಿಲ್ ಬಾಬ್ತು ಆದಾಯ ತೆರಿಗೆ ಪಾವತಿ | 3 ಮತ್ತು 4ನೇ ಎದುರುದಾರರು |
| 24 | ಕ್ರ.ಸಂ. 21 & 22 ಕಾಮಗಾರಿ ಬಿಲ್ ಬಾಬ್ತು ರಾಜಧನ ಪಾವತಿ | –"– |
| 25 | ಕ್ರ.ಸಂ.21 & 22 ಕಾಮಗಾರಿ ಬಿಲ್ ಬಾಬ್ತು ಮೌಲ್ಯ ವರ್ಧಿತ ತೆರಿಗೆ ಪಾವತಿ | –"– |
| 26 | ನರಸಾಪುರ ಗ್ರಾಮದ ಸಿ–ಬ್ಲಾಕ್ ಶ್ರೀ.ಬೋಜಪ್ಪ ಮನೆಯಿಂದ ಶ್ರೀ.ಗೋಪಪ್ಪ ಮನೆಯವರೆಗೆ ಸಿಸಿ ರಸ್ತೆ ನಿರ್ಮಾಣ | 3, 4, 8 ಮತ್ತು 11ನೇ ಎದುರುದಾರರು |
| 27 | ಖಾಜಿಕಲ್ಲಹಳ್ಳಿ ಗ್ರಾಮದ ಶ್ರೀ.ನಾರಾಯಣಪ್ಪ ಮನೆ ಯಿಂದ ಶ್ರೀ.ಕೃಷ್ಣಪ್ಪ ಮನೆ ಯವರೆಗೆ ರಸ್ತೆ ಮತ್ತು ಚರಂಡಿ | 2, 4, 8 ಮತ್ತು 11ನೇ ಎದುರುದಾರರು |
| 28 | ನರಸಾಪುರ ಗ್ರಾಮದ ಸಿ–ಬ್ಲಾಕ್ ಶ್ರೀ.ಅಣ್ಣಗಿರಿಯಪ್ಪ ಮನೆಯಿಂದ ಶ್ರೀ.ಗುಂಡಪ್ಪ ಮನೆಯವರೆಗೆ ಸಿಮೆಂಟ್ ರಸ್ತೆ ಕಾಮಗಾರಿ | –"– |

4) ಮೇಲಿನ ಉಪ ಖಂಡಿಕೆ–3ರ ಕ್ರಮ ಸಂಖ್ಯೆ–4, 6, 15, 16, 18 ರಿಂದ 20, 23 ರಿಂದ 25ರ ಪಾವತಿಗಳು ಕಾಮಗಾರಿಗಳಿಗೆ ಸಂಬಂಧಿಸಿದ ತೆರಿಗೆ ಪಾವತಿ ಮತ್ತು ಕಾಮಗಾರಿಯಲ್ಲಿ ಬಳಸಿದ ಸಾಮಗ್ರಿಗಳ ಖರೀದಿ ಬಾಬ್ತು ರಾಜಧನ ಪಾವತಿಗೆ ಸಂಬಂಧಿಸಿದೆ;

5) ಮೇಲಿನ ಉಪ ಖಂಡಿಕೆ–3ರ ಕ್ರಮ ಸಂಖ್ಯೆ–1 ರಿಂದ 3 ಮತ್ತು 5ರ ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ತುಂಡು ಗುತ್ತಿಗೆ ಆಧಾರದ ಮೇಲೆ ಕರಾರು ಪತ್ರಗಳಡಿ ವಹಿಸಿದೆ. ಸದರಿ ಕರಾರು ಪತ್ರಕ್ಕೆ ಕಿರಿಯ ಅಭಿಯಂತರರು ಸಹಿ ಮಾಡಿದ್ದಾರೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 83ರನ್ವಯ ನಮೂನೆ–36ರಲ್ಲಿ ಪಂಚಾಯತ್ ಕಾರ್ಯದರ್ಶಿ \ ಅಭಿವೃದ್ಧಿ ಅಧಿಕಾರಿ ಕಾರ್ಯಾದೇಶವನ್ನು ನೀಡಿದ ದಾಖಲೆಗಳಿಲ್ಲ. ಸದರಿ ನಿಯಮದನ್ವಯ ಪಂಚಾಯತ್ ಕಾರ್ಯದರ್ಶಿ \ ಅಭಿವೃದ್ಧಿ ಅಧಿಕಾರಿ ಕಾರ್ಯಾದೇಶ ನೀಡದೇ ಪಂಚಾಯತ್ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದಲ್ಲ;

6) ಸದರಿ ಕಾಮಗಾರಿಗಳ ಅಳತೆಯನ್ನು 5ನೇ ಎದುರುದಾರರು ದಾಖಲಿಸಿದ್ದಾರೆ. 9ನೇ ಎದುರುದಾರರು ಸದರಿ ಕಾಮಗಾರಿಗಳ ಚೆಕ್ ಮೆಷರ್‌ಮೆಂಟನ್ನು ಮಾಡಿದ್ದಾರೆಂದು ಕಾಮಗಾರಿ ಮುಕ್ತಾಯದ ವರದಿಗಳು

BD/1760/2018



ಮತ್ತು ಗುತ್ತಿಗೆದಾರರ ಬಿಲ್ಲುಗಳಲ್ಲಿ ದಾಖಲಾಗಿದೆ. ಆದರೆ, ಸದರಿ ಅಂಶವು ಅಳತೆ ಪುಸ್ತಕಗಳಲ್ಲಿ ಕಂಡು ಬಂದಿಲ್ಲ;

7) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು–2006ರ ನಿಯಮ 85ರಲ್ಲಿ ಹೇಳಿದಂತೆ ನಮೂನೆ–37ರಲ್ಲಿ ಅಳತೆ ವಹಿಯನ್ನು ನಿರ್ವಹಿಸಿಲ್ಲ;

8) ಕಾಮಗಾರಿ ಮುಕ್ತಾಯವಾದ ದಿನಾಂಕವನ್ನು ಅಳತೆ ಪುಸ್ತಕದಲ್ಲಿ ನಮೂದಿಸಿಲ್ಲ;

9) ಕ್ರಮ ಸಂಖ್ಯೆ–5 ಕಾಮಗಾರಿಗೆ ಸಂಬಂಧಿಸಿದ ಅಳತೆ ಪುಸ್ತಕವಿಲ್ಲ. ಕ್ರಮ ಸಂಖ್ಯೆ–1 ರಿಂದ 3 ಮತ್ತು 5ರ ಕಾಮಗಾರಿಗಳ ಅಂದಾಜು ₹25,000/–ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ನಿಯಮ 85(6) ರನ್ವಯ ಗುತ್ತಿಗೆದಾರರಿಗೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ಅಳತೆ ಪುಸ್ತಕದ ಮೇಲೆ "ಪೇಡ್ & ಕ್ಯಾನ್ಸಲ್ಡ್" ಮೊಹರನ್ನು ಹಾಕಬೇಕು. ಅಳತೆ ಪುಸ್ತಕದ ಪ್ರತಿಯಲ್ಲಿ ಸದರಿ ಮೊಹರು ಇಲ್ಲ;

10) ಮೇಲಿನ ಉಪ ಖಂಡಿಕೆ–3ರ ಕ್ರಮ ಸಂಖ್ಯೆ–7 ಖರ್ಚಿಗೆ ಸಂಬಂಧಿಸಿದಂತೆ ಶ್ರೀ ಚೌಡೇಶ್ವರಿ ಇಂಜಿನಿಯರಿಂಗ್ ವರ್ಕ್ಸ್‌ನ ನಗದು ರಸೀದಿಗಳು (ನಂ.12 ದಿ:09/06/16 ₹15,400/–, ನಂ.13, ದಿ:25/06/16 ₹10,050/–, ನಂ.14, ದಿ:02/07/16 ₹9,750/–, ನಂ.15, ದಿ:11/07/16 ₹17,050/–, ನಂ.16 ದಿ:20/07/16 ₹10,650/– ಮತ್ತು ನಂ.17 ದಿ:23/07/16 ₹15,950/–) ಮಾತ್ರ ಲಭ್ಯವಿದೆ. ಸದರಿ ರಸೀದಿಗಳು ಮೋಟಾರ್ ರಿವೈಂಡಿಂಗ್\ರಿಪೇರಿ ಇತ್ಯಾದಿ ಕೆಲಸಗಳಿಗೆ ಸಂಬಂಧಪಟ್ಟಿದೆ. ಸದರಿ ಖರ್ಚಿಗೆ ಸಂಬಂಧಿಸಿದಂತೆ ಆಹ್ವಾನಿಸಿದ ದರ ಪಟ್ಟಿ, ಖರೀದಿ ಬಿಲ್ಲು, ರಸೀದಿ, ವೋಚರ್ ಮುಂತಾದ ದಾಖಲೆಗಳಿಲ್ಲ. ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ₹5,000/– ಮೀರಿದ ₹1,00,000/–ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು. ಕೆಎಫ್‌ಸಿ ಪರಿಚ್ಛೇದ 57ರನ್ವಯ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು. ಆದರೆ, ಮೇಲೆ ಹೇಳಿದ 06 ನಗದು ರಸೀದಿಗಳನ್ನು ಹೊರತುಪಡಿಸಿ, ಸದರಿ ಖರ್ಚುಗಳಿಗೆ ಸಂಬಂಧಿಸಿದ ಯಾವುದೇ ದಾಖಲೆಗಳಿಲ್ಲ. ಕಾರಣ, ಸದರಿ ಪಾವತಿ ನಿಯಮಬಾಹಿರವಾಗಿದೆ;

11) ಮೇಲಿನ ಉಪ ಖಂಡಿಕೆ–3ರ ಕ್ರಮ ಸಂಖ್ಯೆ–8 ಮತ್ತು 9 ಕಾಮಗಾರಿಗಳ ಅಂದಾಜು ಮೊತ್ತ ₹1 ಲಕ್ಷ ಮೀರಿದೆ. ಕೆಟಿಪಿಪಿ ಕಾಯಿದೆ ಅನ್ವಯ ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದು ನಿಯಮಾನುಸಾರ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಯನ್ನು ನಿರ್ವಹಿಸಬೇಕು. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 81ರಲ್ಲಿಯೂ ಈ ವಿಷಯವನ್ನು ಪ್ರಸ್ತಾಪಿಸಿದೆ. ಸದರಿ ಎರಡು ಕಾಮಗಾರಿಗಳಿಗೆ ಟೆಂಡರ್ ಕರೆದ ದಾಖಲೆಗಳಿಲ್ಲ. ಸದರಿ ಎರಡು ಕಾಮಗಾರಿಗಳನ್ನು ತುಂಡು ಗುತ್ತಿಗೆ ಕರಾರಿನಡಿ ಗುತ್ತಿಗೆದಾರರಿಗೆ 3ನೇ ಎದುರುದಾರರು ನಿಯಮಬಾಹಿರವಾಗಿ ವಹಿಸಿದ್ದಾರೆ. ಕಾಮಗಾರಿಗಳ ಅಳತೆಯನ್ನು 6ನೇ ಎದುರುದಾರರು ದಾಖಲಿಸಿದ್ದಾರೆ. 10ನೇ ಎದುರುದಾರರು ಸದರಿ ಕಾಮಗಾರಿಗಳ ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆ. ಅಳತೆಯನ್ನು ದಾಖಲಿಸಿದ ದಿನಾಂಕವನ್ನು ಕಿರಿಯ ಅಭಿಯಂತರರು ಅಳತೆ ಪುಸ್ತಕದಲ್ಲಿ ದಾಖಲಿಸಿಲ್ಲ.

ಸದರಿ ಕಾಮಗಾರಿಗಳ ಅಂದಾಜು ₹25,000/-ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಿದ್ದು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ಗುತ್ತಿಗೆದಾರರಿಗೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ನಿಯಮ 85(6) ಪಾಲನೆಯಾಗಿಲ್ಲ;

12) ಮೇಲಿನ ಉಪ ಖಂಡಿಕೆ-3ರ ಕ್ರಮ ಸಂಖ್ಯೆ-10 ಮತ್ತು 11 ಕಾಮಗಾರಿಗಳನ್ನು (ಅಂದಾಜು ಮೊತ್ತ ಕ್ರಮವಾಗಿ ₹1 ಲಕ್ಷ ಮತ್ತು ₹40,000/-) ತುಂಡು ಗುತ್ತಿಗೆ ಕರಾರು ಪತ್ರಗಳಡಿ 3ನೇ ಎದುರುದಾರರು ಗುತ್ತಿಗೆದಾರರಿಗೆ ನೀಡಿದ್ದಾರೆ. ಸದರಿ ಕಾಮಗಾರಿಗಳ ಉಸ್ತುವಾರಿಯನ್ನು 6ನೇ ಎದುರುದಾರರು ಮತ್ತು ಚೆಕ್ ಮೆಷರ್‌ಮೆಂಟನ್ನು 10ನೇ ಎದುರುದಾರರು ಮಾಡಿದ್ದಾರೆ. ಸದರಿ ಕಾಮಗಾರಿಗಳ ಅಳತೆ ವಹಿ ಇಲ್ಲ. ಸದರಿ ಕಾಮಗಾರಿಗಳ ಅಂದಾಜು ₹25,000/-ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ಗುತ್ತಿಗೆದಾರರಿಗೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ನಿಯಮ 85(6) ಪಾಲನೆಯಾಗಿಲ್ಲ;

13) ಮೇಲಿನ ಉಪ ಖಂಡಿಕೆ-3ರ ಕ್ರಮ ಸಂಖ್ಯೆ-12 ಕಾಮಗಾರಿಯನ್ನು ತುಂಡು ಗುತ್ತಿಗೆ ಕರಾರು ಪತ್ರಗಳಡಿ 3ನೇ ಎದುರುದಾರರು ಗುತ್ತಿಗೆದಾರರಿಗೆ ನೀಡಿದ್ದಾರೆ. ಸದರಿ ಕಾಮಗಾರಿಗಳ ಉಸ್ತುವಾರಿಯನ್ನು 7ನೇ ಎದುರುದಾರರು ಮತ್ತು ಚೆಕ್ ಮೆಷರ್‌ಮೆಂಟನ್ನು 11ನೇ ಎದುರುದಾರರು ಮಾಡಿದ್ದಾರೆ. ಸದರಿ ಕಾಮಗಾರಿಗಳ ಅಳತೆ ವಹಿ ಇಲ್ಲ. ಸದರಿ ಕಾಮಗಾರಿಗಳ ಅಂದಾಜು ₹25,000/-ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ಗುತ್ತಿಗೆದಾರರಿಗೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ನಿಯಮ 85(6) ಪಾಲನೆಯಾಗಿಲ್ಲ;

14) ಮೇಲಿನ ಉಪ ಖಂಡಿಕೆ-3ರ ಕ್ರಮ ಸಂಖ್ಯೆ-13ರ ಮೊತ್ತವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ರವರ ದಿನಾಂಕ:22/09/16ರ ಜ್ಞಾಪನ ಸಂಖ್ಯೆ:ಜಿಪಂಕೋ:ಸಿಡಿಪಿ (6):ಗ್ರಾನೀಸ:ಸಿಆರ್.29:16-17ರನ್ವಯ ₹1,45,000/-ನ್ನು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ ರವರ ಹೆಸರಿನಲ್ಲಿ ತೆರೆದಿರುವ ಎಸ್‌ಬಿಎಂ, ಕೋಲಾರ ಶಾಖೆಯ ಖಾತೆ ಸಂಖ್ಯೆ:64161185037ಕ್ಕೆ ಪಂಚಾಯತ್ ಖಾತೆಯಿಂದ ಚೆಕ್ ಮುಖೇನ ವರ್ಗಾವಣೆ ಮಾಡಿರುವುದರಿಂದ, ಸದರಿ ಮೊತ್ತ ದುರುಪಯೋಗ ಆಗಿಲ್ಲ;

15) ಮೇಲಿನ ಉಪ ಖಂಡಿಕೆ-3ರ ಕ್ರಮ ಸಂಖ್ಯೆ-14, 17 ಮತ್ತು 21 ಕಾಮಗಾರಿಗಳ ಅಂದಾಜು ಮೊತ್ತ ₹1 ಲಕ್ಷ ಮೀರಿದೆ. ಕೆಟಿಪಿಪಿ ಕಾಯಿದೆ ಅನ್ವಯ ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದು ನಿಯಮಾನುಸಾರ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಬೇಕು. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 81ರಲ್ಲಿಯೂ ಈ ವಿಷಯವನ್ನು ಪ್ರಸ್ತಾಪಿಸಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದ ದಾಖಲೆಗಳಿಲ್ಲ. ಸದರಿ ಕಾಮಗಾರಿಗಳನ್ನು ತುಂಡು ಗುತ್ತಿಗೆ ಕರಾರಿನಡಿ ಗುತ್ತಿಗೆದಾರರುಗಳಿಗೆ 4ನೇ ಎದುರುದಾರರು ನಿಯಮಬಾಹಿರವಾಗಿ ವಹಿಸಿದ್ದಾರೆ. ಕಾಮಗಾರಿಗಳ ಅಳತೆಯನ್ನು 7ನೇ

ಎದುರುದಾರರು ದಾಖಲಿಸಿದ್ದಾರೆ. 11ನೇ ಎದುರುದಾರರು ಸದರಿ ಕಾಮಗಾರಿಗಳ ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆ. ಅಳತೆಯನ್ನು ದಾಖಲಿಸಿದ ದಿನಾಂಕವನ್ನು 7ನೇ ಎದುರುದಾರರು ಅಳತೆ ಪುಸ್ತಕದಲ್ಲಿ ದಾಖಲಿಸಿಲ್ಲ. ಸದರಿ ಕಾಮಗಾರಿಗಳ ಅಂದಾಜು ₹25,000/-ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಗಳ ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ಗುತ್ತಿಗೆದಾರರುಗಳಿಗೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ನಿಯಮ 85(6) ಪಾಲನೆಯಾಗಿಲ್ಲ;

16) ಮೇಲಿನ ಉಪ ಖಂಡಿಕೆ-3ರ ಕ್ರಮ ಸಂಖ್ಯೆ-22 ಕಾಮಗಾರಿಯನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಕರಾರು ಪತ್ರದಲ್ಲಿ ವಹಿಸಿದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 83ರನ್ವಯ ನಮೂನೆ-36ರಲ್ಲಿ ಪಂಚಾಯತ್ ಕಾರ್ಯದರ್ಶಿ \ ಅಭಿವೃದ್ಧಿ ಅಧಿಕಾರಿ ಕಾರ್ಯಾದೇಶವನ್ನು ನೀಡಿದ ದಾಖಲೆಗಳಿಲ್ಲ. ಸದರಿ ನಿಯಮದನ್ವಯ ಪಂಚಾಯತ್ ಕಾರ್ಯದರ್ಶಿ \ ಅಭಿವೃದ್ಧಿ ಅಧಿಕಾರಿ ಕಾರ್ಯಾದೇಶ ನೀಡದೇ ಪಂಚಾಯತ್ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದಲ್ಲ. ಕಾಮಗಾರಿಯ ಉಸ್ತುವಾರಿಯನ್ನು 7ನೇ ಎದುರುದಾರರು ವಹಿಸಿದ್ದಾರೆ. 11ನೇ ಎದುರುದಾರರು ಸದರಿ ಕಾಮಗಾರಿಯ ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆ;

17) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು-2006ರ ನಿಯಮ 85ರಲ್ಲಿ ಹೇಳಿದಂತೆ ನಮೂನೆ-37ರಲ್ಲಿ ಅಳತೆ ವಹಿಯನ್ನು ನಿರ್ವಹಿಸದೇ ಇರುವುದು ಕಂಡು ಬಂದಿದೆ. ಕಾಮಗಾರಿ ಮುಕ್ತಾಯವಾದ ದಿನಾಂಕವನ್ನು ಅಳತೆ ಪುಸ್ತಕದಲ್ಲಿ ನಮೂದಿಸಿಲ್ಲ. ಸದರಿ ಕಾಮಗಾರಿಯ ಅಂದಾಜು ₹25,000/-ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ನಿಯಮ 85(6) ರನ್ವಯ ಗುತ್ತಿಗೆದಾರರಿಗೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ಅಳತೆ ಪುಸ್ತಕದ ಮೇಲೆ "ಪೇಡ್ & ಕ್ಯಾನ್ಸಲ್ಡ್" ಮೊಹರನ್ನು ಹಾಕಬೇಕು. ಅಳತೆ ಪುಸ್ತಕದ ಪ್ರತಿಯಲ್ಲಿ ಸದರಿ ಮೊಹರು ಕಂಡು ಬಂದಿಲ್ಲ;

18) ಮೇಲಿನ ಉಪ ಖಂಡಿಕೆ-3ರ ಕ್ರಮ ಸಂಖ್ಯೆ-26 ಕಾಮಗಾರಿಯನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಕರಾರು ಪತ್ರದಲ್ಲಿ ವಹಿಸಿದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಡ್ಜೆಟ್) ನಿಯಮಗಳು, 2006ರ ನಿಯಮ 83ರನ್ವಯ ನಮೂನೆ-36ರಲ್ಲಿ ಪಂಚಾಯತ್ ಕಾರ್ಯದರ್ಶಿ \ ಅಭಿವೃದ್ಧಿ ಅಧಿಕಾರಿ ಕಾರ್ಯಾದೇಶವನ್ನು ನೀಡಿದ ದಾಖಲೆಗಳಿಲ್ಲ. ಸದರಿ ನಿಯಮದನ್ವಯ ಪಂಚಾಯತ್ ಕಾರ್ಯದರ್ಶಿ \ ಅಭಿವೃದ್ಧಿ ಅಧಿಕಾರಿ ಕಾರ್ಯಾದೇಶ ನೀಡದೇ ಪಂಚಾಯತ್ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭಿಸತಕ್ಕದ್ದಲ್ಲ. ಕಾಮಗಾರಿಯ ಉಸ್ತುವಾರಿಯನ್ನು 8ನೇ ಎದುರುದಾರರು ವಹಿಸಿದ್ದಾರೆ. 11ನೇ ಎದುರುದಾರರು ಸದರಿ ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಿದ್ದಾರೆ;

19) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು-2006ರ ನಿಯಮ 85ರಲ್ಲಿ ಹೇಳಿದಂತೆ ನಮೂನೆ-37ರಲ್ಲಿ ನಿರ್ವಹಿಸ ಬೇಕಾದ ಅಳತೆ ವಹಿ ಲಭ್ಯವಿಲ್ಲ. ಸದರಿ ಕಾಮಗಾರಿಯ ಅಂದಾಜು ₹25,000/-ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು

ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ;

20) ಮೇಲಿನ ಉಪ ಖಂಡಿಕೆ–3ರ ಕ್ರಮ ಸಂಖ್ಯೆ–27 ಮತ್ತು 28 ಕಾಮಗಾರಿಗಳ ಅಂದಾಜು ಮೊತ್ತ ₹1 ಲಕ್ಷ ಮೀರಿದೆ. ಕೆಟಿಪಿಪಿ ಕಾಯಿದೆ ಅನ್ವಯ ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದು ನಿಯಮಾನುಸಾರ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಬೇಕು. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು & ಬಜೆಟ್) ನಿಯಮಗಳು, 2006ರ ನಿಯಮ 81ರಲ್ಲಿಯೂ ಈ ವಿಷಯವನ್ನು ಪ್ರಸ್ತಾಪಿಸಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದ ದಾಖಲೆಗಳಿಲ್ಲ. ಸದರಿ ಕಾಮಗಾರಿಗಳನ್ನು ತುಂಡು ಗುತ್ತಿಗೆ ಕರಾರುಗಳಡಿ ಗುತ್ತಿಗೆದಾರರುಗಳಿಗೆ 2 ಮತ್ತು 4ನೇ ಎದುರುದಾರರು ನಿಯಮಬಾಹಿರವಾಗಿ ವಹಿಸಿದ್ದಾರೆ. ಕಾಮಗಾರಿಗಳ ಅಳತೆಯನ್ನು 8ನೇ ಎದುರುದಾರರು ದಾಖಲಿಸಿದ್ದಾರೆ. 11ನೇ ಎದುರುದಾರರು ಕಾಮಗಾರಿಗಳ ಚೆಕ್ ಮೆಷರ್‌ಮೆಂಟ್ ಮಾಡಿದ್ದಾರೆ. ನಿಯಮ 85ರಲ್ಲಿ ಹೇಳಿದಂತೆ ನಮೂನೆ–37ರಲ್ಲಿ ನಿರ್ವಹಿಸಬೇಕಾದ ಅಳತೆ ವಹಿ ಇಲ್ಲ. ಸದರಿ ಕಾಮಗಾರಿಗಳ ಅಂದಾಜು ₹25,000/–ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 4ನೇ ಎದುರುದಾರರು ಕಾಮಗಾರಿಗಳ ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ಗುತ್ತಿಗೆದಾರರುಗಳಿಗೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ನಿಯಮ 85(6) ಪಾಲನೆಯಾಗಿಲ್ಲ;

21) ಕಾರಣ, ಹಿಂದಿನ ಉಪ ಖಂಡಿಕೆ–5 ರಿಂದ 20ರಲ್ಲಿ ಹೇಳಿದ ಲೋಪಗಳಿಗೆ 3 ರಿಂದ 11ನೇ ಎದುರುದಾರರುಗಳು ಜವಾಬ್ದಾರರಾಗಿದ್ದಾರೆ.

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 3 ರಿಂದ 11ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

10. ಒಂದು (1) ಮತ್ತು 2ನೇ ಎದುರುದಾರರುಗಳ ಪಾತ್ರ ಕಂಡು ಬರುವುದಿಲ್ಲವಾದ್ದರಿಂದ, ಸದರಿಯವರುಗಳ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

11. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 3 ರಿಂದ 11ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

BD/1760/2018



12. ನಾಲ್ಕನೇ (4ನೇ) ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅನ್ವಯ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

13. ಅದಲ್ಲದೆ, 3 ಮತ್ತು 5 ರಿಂದ 11ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, 7ನೇ ಎದುರುದಾರರು ದಿನಾಂಕ:31/05/2018ರಂದು ನಿವೃತ್ತಿ ಹೊಂದಿರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು **ಕೆಸಿಎಸ್ ನಿಯಮ** 214(2)(ಬಿ)(i)ರ ಅಡಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಸಕ್ಷಮ ಪ್ರಾಧಿಕಾರವನ್ನು ಕೋರಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 7ನೇ ಎದುರುದಾರರು ದಿನಾಂಕ:31/05/2018 ರಂದು ನಿವೃತ್ತಿ ಹೊಂದಿದ್ದಾರೆ.

20-1-20

**(ನ್ಯಾಯಾಮೂರ್ತಿ ಬಿ.ಎಸ್.ಪಾಟೀಲ್)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**